ಉಡುಪಿ ವಿಧಾನ ಸಭಾ ಕ್ಷೇತ್ರದಲ್ಲಿ ಬಂದ ಅರ್ಜಿಗಳ ವಿಲೇವಾರಿ ಅಕ್ರಮಸಕ್ರಮ ಸಮಿತಿ

459 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉಡುಪಿ ವಿಧಾನ ಸಭಾ ಕ್ಷೇತ್ರದ ಮಲ್ಪೆ ಪುತ್ತೂರು ಮಣಿಪಾಲ ಬೈಲೂರು ಹಾಗೂ ಹೆರ್ಗಾ ಗ್ರಾಮ ಪಂಚಾಯತ್‌ಗಳು ಉಡುಪಿ ಪುರಸಭೆಗೆ ಸೇರಿರುವುದರಿಂದ ಕಳೆದ ಹಲವಾರು ವರ್ಷಗಳಿಂದ ಅಕ್ರಮವಾಗಿ ಕೃಷಿ ಹಾಗೂ ಮನೆಕಟ್ಟಿ ಕುಳಿತವರ ಅಕ್ರಮ ಸಮಿತಿಗೆ ಸಲ್ಲಿಸಿದ ಅರ್ಜಿಗಳ ವಿಲೇವಾರಿ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಮೇಲಿನ ಪಂಚಾಯತ್‌ಗಳಿಗೆ ಸೇರಿದ ಪ್ರದೇಶಗಳಿಂದ ನಮೂನೆ 50 ರಲ್ಲಿ ಒಟ್ಟು 1357 ಅರ್ಜಿಗಳು ಬಂದಿದ್ದು, 324.74 ಎಕರೆ ಸರ್ಕಾರಿ ಜಮೀನನ್ನು ಒಳಗೊಂಡಿರುವುದಾಗಿರುತ್ತವೆ. ಈ ಎಲ್ಲಾ ಅರ್ಜಿಗಳ ಬಗ್ಗೆ ಪರಿಶೀಲನಾ ವರದಿ ತರಿಸಿಕೊಂಡಿದ್ದು, ಈತನಕ 140 ಕಡತಗಳನ್ನು ಸಕ್ರಮೀಕರಣ ಸಮಿತಿಯ ಬೈಠಕ್‌ಗಳಲ್ಲಿ ಪರಿಶೀಲಿಸಿದ್ದು ಅವುಗಳ ಪೈಕಿ 110ಅರ್ಜಿಗಳ ಬಗ್ಗೆ 20.39ಎಕರೆ ಮಂಜೂರಾತಿಯಾಗಿದ್ದು. 30 ಅರ್ಜಿಗಳಲ್ಲಿ $11.80\frac{1}{2}$ ಎಕರೆ ತಿರಸ್ಕೃತವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಸಾರಿಗೆ ಸಂಸ್ಥೆಯ ಬಸ್ಸುಗಳ ಕುರಿತು.

211 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ಸಂಸ್ಥೆಗೆ ಸಂಬಂಧಿಸಿರುವ ಒಟ್ಟು ಬಸ್ಸುಗಳೆಷ್ಟು?

ಆ) ಅದರಲ್ಲಿ ಕೆಂಪು ಬಸ್ಸು, ಸೆಮಿ ಡಿಲಿಕ್ಸ್ ಹಾಗೂ ಸುವಿಹಾರಿ ಬಸ್ಸುಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು.)

ಇ) ಬಸ್ಸುಗಳ ಕೊರತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಇದೆ? (ತಾಲ್ಲೂಕುವಾರು ವಿವರ ನೀಡುವುದು.)

ಈ) ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು.

ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸ ಬಸ್ಸು ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ನೀಡಲಾಗಿದೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆ 450 ವಾಹನ ಬಲವನ್ನು ಹೊಂದಿದೆ.

ಆ) ಈ ವಿಭಾಗದಲ್ಲಿ ಹೊಂದಿರುವ ಸುವಿಹಾರಿ ಅರೆ ಸುವಿಹಾರಿ ಗ್ರಾಮಾಂತರ ವಾಹನಗಳು ಈ ಕೆಳಕಂಡಂತಿವೆ.

ಮಾದರಿ	ಸಿರ್ಸಿ	ಹಳಿಯಾಳ	ಕುಮಟಾ	ಕಾರವಾರ್	ಭಟ್ಕಲ್	ಒಟ್ಟು
ಸುವಿಹಾರಿ	5	2	2	2	2	13
ಅರೆ ಸುವಿಹಾರಿ	5	2	10	7	4	28
ಗ್ರಾಮಾಂತರ	117	84	77	83	48	409
ಒಟ್ಟು	127	88	89	92	54	450